# ಕೂಡಿ ಓದೋಣ ಬಾ ಕಂದ..



ಪುಟ್ಟ ಮಕ್ಕಳಿಗೆ ಪುಸ್ತಕಗಳಿಂದ ಸ್ವಯಂ ಓದುವುದನ್ನು ಕಲಿಸಿದಾಗ, ತನ್ನಿಂದ ತಾನೇ ಶಾಲೆಯಲ್ಲಿ ಹಾಗೂ ಸಾಮಾನ್ಯ ಜ್ಞಾನದಲ್ಲೂ ಮಹತ್ತರವಾದ ಸುಧಾರಣೆ ಕಾಣುತ್ತಾರೆ.

■ **ಡಾ. ಶುಭ್ರತಾ ವಿಕ್ರಮ್**
ಚಿತ್ರ: ತಾಜುದ್ದೀನ್ ಆಜಾದ್

**ಈ** ಆಧುನಿಕ ತಂತ್ರಜ್ಞಾನದ ಯುಗದಲ್ಲಿ 'ನನಗೊಂದು ಚೆಂದದ ಕತೆ ಪುಸ್ತಕ ಬೇಕು' ಎಂದು ಅಮ್ಮಂದಿರ ಬಳಿ ದುಂಬಾಲು ಬೀಳುವ ಮಕ್ಕಳಿಗಿಂತ 'ನನಗೆ ಐ ಪ್ಯಾಡ್ ಹಾಕು, ಪೆಪ್ಪಾ ಪಿಗ್ ನೋಡ್ತೀನಿ, ಇಲ್ಲದಿದ್ದರೆ, ಟಿ.ವಿ. ಯಲ್ಲಿ ಟಾಮ್ ಅಂಡ್ ಜೆರಿ ನೋಡ್ತೀನಿ' ಎಂದು ಹೇಳುವ ಮಕ್ಕಳೇ ಹೆಚ್ಚು. ಓದುವ ಹವ್ಯಾಸ ಕೇವಲ ಶಾಲೆಯ ಕಲಿಕೆಗೆ, ಸ್ಪೆಲ್ಲಿಂಗ್ ಕಲಿಯುವುದಕ್ಕೆ, ಪರೀಕ್ಷೆಗಳಲ್ಲಿ ಅಂಕಗಳನ್ನು ತೆಗೆಯುವುದಕ್ಕೆ ಸೀಮಿತವಾಗಿದೆ.

ಓದುವುದು ಶಾಲೆಯ ಕಲಿಕೆಗೆ ಅತ್ಯಗತ್ಯ, ನಿಜ. ಆದರೆ ಇದೆಲ್ಲಕ್ಕೂ ಮೀರಿ, ಮಕ್ಕಳಿಗೆ ಅವರವರ ಕಲ್ಪನೆಗಳನ್ನು ವಿಸ್ತರಿಸಿಕೊಳ್ಳಲು, ಜೀವನವನ್ನು ಅರ್ಥ ಮಾಡಿಕೊಳ್ಳಲು, ಜೀವನದ ಮೌಲ್ಯಗಳನ್ನು ತಿಳಿಯಲು ಓದುವ ಹವ್ಯಾಸ ಸಹಾಯ ಮಾಡಬೇಕು. ಅದಕ್ಕೇ ಅಮೆರಿಕಾದ ಪ್ರಸಿದ್ಧ ಖಗೋಳ ಶಾಸ್ತ್ರಜ್ಞನೊಬ್ಬ 'ಪೋಷಕರು ತಮ್ಮ ಮಕ್ಕಳಿಗೆ ಕೊಡಬಹುದಾದ ಅತ್ಯುತ್ತಮ ಉಡುಗೊರೆಗಳಲ್ಲಿ ಓದುವ ಹವ್ಯಾಸವೂ ಒಂದು' ಎಂದು ಹೇಳಿದ್ದಾನೆ. ಪುಟ್ಟ ಮಕ್ಕಳಿಗೆ ಪುಸ್ತಕಗಳಿಂದ ಸ್ವಯಂ ಓದುವುದನ್ನು ಕಲಿಸಿದಾಗ ತನ್ನಿಂದ ತಾನೇ, ಮಕ್ಕಳು ಶಾಲೆಯಲ್ಲಿ ಹಾಗೂ ಸಾಮಾನ್ಯ ಜ್ಞಾನದಲ್ಲೂ ಮಹತ್ತರವಾದ ಸುಧಾರಣೆ ಕಾಣುತ್ತಾರೆ. ಅದರಲ್ಲೂ ಅವರಿಗೆ ಈ ಚಟುವಟಿಕೆಯಲ್ಲಿ ಆಸಕ್ತಿ ಬರುವ ಹಾಗೆ ಮಾಡಿದರೆ ಇನ್ನೂ ಒಳಿತು. ಆಸಕ್ತಿಯಿಂದ ಮಾಡಿದ ಕೆಲಸ ಉತ್ತಮ ಫಲಿತಾಂಶಗಳನ್ನು ನೀಡುತ್ತದೆ.

ಮನೋವೈಜ್ಞಾನಿಕವಾಗಿ, ಮಕ್ಕಳಲ್ಲಿ ಓದುವ ಕೌಶಲ್ಯ ಬೆಳೆಯುವ ಬಗೆ ಹೇಗೆ?

ಒಂದು ವರ್ಷದ ಒಳಗಿನ ಮಕ್ಕಳು: ಸಾಮಾನ್ಯವಾಗಿ, ಮೆದುವಾದ ಕವರ್‌ಪುಟ ಇರುವ ಪುಸ್ತಕಗಳಲ್ಲಿ ಕುತೂಹಲ ವ್ಯಕ್ತಪಡಿಸುತ್ತಾರೆ. ಈ ಪುಸ್ತಕಗಳನ್ನು, ಅದರಲ್ಲಿರುವ ಚಿತ್ರಗಳನ್ನು ನೋಡಿ, ಮುಟ್ಟಿ ಸಂತಸ ಪಡುತ್ತಾರೆ. ಪುಟಗಳನ್ನು ಕೂಡ ತಿರುವು ಹಾಕುತ್ತಾರೆ.

ಒಂದರಿಂದ ಮೂರು ವರ್ಷದ ಮಕ್ಕಳು: ಪುಸ್ತಕಗಳಲ್ಲಿರುವ ಪರಿಚಿತ ವಸ್ತುಗಳ/ಪ್ರಾಣಿಗಳ ಹೆಸರನ್ನು ನೋಡಿ ಹೇಳಬಲ್ಲರು. ತಮ್ಮ ಇಷ್ಟವಾದ ಪುಸ್ತಕಗಳನ್ನು ಗುರುತಿಸಬಲ್ಲರು. ಪುಟ ತಿರುಗಿಸುತ್ತಾ ಓದುವಂತೆ ನಟಿಸಬಲ್ಲರು.

ಮೂರರಿಂದ ನಾಲ್ಕು ವರ್ಷದ ಮಕ್ಕಳು: ಪುಸ್ತಕ ಸರಿಯಾಗಿ ಹಿಡಿಯಬಲ್ಲರು. ಶಬ್ದಗಳನ್ನು/ವಾಕ್ಯಗಳನ್ನು ಎಡದಿಂದ ಬಲಗಡೆಗೆ ಮತ್ತು ಮೇಲಿನಿಂದ ಕೆಳಗೆ ಓದಬೇಕೆಂದು ತಿಳಿದಿರುತ್ತಾರೆ. ಹೇಳಿಕೊಟ್ಟರೆ, ಹಲವು ಅಕ್ಷರಗಳನ್ನು ಗುರುತಿಸಬಲ್ಲರು. ಅಕ್ಷರಗಳು ಮಾಡುವ ಧ್ವನಿಗೆ ಅಕ್ಷರಗಳನ್ನು ಜೋಡಿಸಬಲ್ಲರು.

ಐದು ವರ್ಷದ ಮಕ್ಕಳು: ಈ ವಯಸ್ಸಿಗೆ ಒಂದು ಸರಳವಾದ ಶಬ್ದ ಬರೆದರೆ, ಅದರ ಮೊದಲ ಹಾಗೂ ಕೊನೆಯ ಅಕ್ಷರ ಗುರುತಿಸಿ ಓದಬಲ್ಲರು. 'sight memory/visual memory'ಯಿಂದ ಹಲವಾರು ಶಬ್ದಗಳನ್ನು ಗುರುತಿಸಬಲ್ಲರು. ಉದಾಹರಣೆಗೆ, 'Thanku U' ಫಲಕವನ್ನು ನಿಮ್ಮ ಮನೆಯ ಗೋಡೆಗೆ ಹಾಕಿದ್ದರೆ, ದಿನವೂ ನೋಡಿ, ಸ್ಪೆಲ್ಲಿಂಗ್ ಬರದಿದ್ದರೂ, ಶಬ್ದವನ್ನು ಓದಬಲ್ಲರು. ಹಲವಾರು ಮಕ್ಕಳಿಗೆ, ಸರಿಯಾದ ತರಬೇತಿ ಸಿಕ್ಕರೆ ಆರರಿಂದ ಎಂಟು ವರ್ಷಗಳ ವಯಸ್ಸಿಗೆ, ಓದುವ ಕೌಶಲ್ಯ (reading skill) ತಕ್ಕಮಟ್ಟಿಗೆ ಸಿದ್ಧಿಸಿರುತ್ತದೆ.

ಓದುವುದು ಒಂದು ಅದ್ಭುತ ಮತ್ತು ಸಂಕೀರ್ಣ ಪ್ರಕ್ರಿಯೆ. ಓದಲಾಗದವರಿಗೆ ಓದುವುದು ಒಂದು ನಿಗೂಢ ರಹಸ್ಯವಿದ್ದಂತೆ. ಈಗ 2–3 ದಶಕಗಳ ಹಿಂದೆ, ಓದುವಾಗ ದೇಹ ಮತ್ತು ಮಿದುಳುಗಳಲ್ಲಿ ಆಗುವ ವೈಜ್ಞಾನಿಕ ಪ್ರಕ್ರಿಯೆಯ ಬಗ್ಗೆ ಮಾಹಿತಿ ಇರಲಿಲ್ಲ. ಇತ್ತೀಚಿನ ವೈಜ್ಞಾನಿಕ ಬೆಳವಣಿಗೆಗಳು, ಸಂಶೋಧನೆಗಳು, ಈ ಓದುವಾಗಿನ ಸಂಕೀರ್ಣ ಪ್ರಕ್ರಿಯೆ ಬಗ್ಗೆ ಸಾಕಷ್ಟು ಬೆಳಕು ಚೆಲ್ಲಿದೆ. ಕಣ್ಣಿಗೆ ಕಾಣುವ ವಿವಿಧ ಆಕಾರಗಳ ಅಕ್ಷರಗಳು, ಚಿಹ್ನೆಗಳು, ಅಕ್ಷರಗಳಿಂದ ಕೂಡಿದ ಶಬ್ದಗಳು, ಈ ಎಲ್ಲ ಗ್ರಾಫಿಕ್ ವಿವರಗಳು, ಮಿದುಳಿಗೆ ಸಂದೇಶವಾಗಿ ರವಾನೆಗೊಂಡು, ಮಿದುಳಿನ ನಿರ್ದಿಷ್ಟ ಜಾಗಗಳಲ್ಲಿ ಪ್ರಕ್ರಿಯೆಗೊಂಡಾಗ ಮಾತ್ರ ನಮಗೆ ಓದಲು ಸಾಧ್ಯ.

ಹಾಗೆ ನೋಡಿದರೆ, ಓದುವುದು ಒಂದು ಅದ್ಭುತ ಕೌಶಲವೇ ಸರಿ. ಯಾಕೆಂದರೆ 'o' ಆಕಾರಕ್ಕೂ, ಅದರ

